# BMS SCHOOL OF ARCHITECTURE
Yelahanka, Bangalore- 560 064.

Ref. No.: 8-9/ BMSSA/2019-20/Admission/ 848 Date: 11.11.2019

## CIRCULAR

The students who wish to apply or those who are already submitted application forms for Scholarship belonging to **epass** are hereby informed that a circular from VTU has been received indicating that the students are requested to submit **Consent for Authentication of Aadhar number in a prescribed form.**

The **same has to be submitted on or before 13/11/2019**, if Consent Authentication is not submitted with in the due date the Application form for scholarship will be rejected.

**DIRECTOR**
**BMSSA**

Enclosures:

1. Circular from VTU – dated 08.11.2019
2. Aadhar Consent Authentication Form.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಜಿಲ್ಲಾ ಅಧಿಕಾರಿಗಳ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ವಿ.ವಿ.ಗೋಪುರ,ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು ನಗರ ಜಿಲ್ಲೆ

ಇ-ಮೇಲ್ : **dobcmbengaluruurban1@gmail.com** ಫ್ಯಾಕ್ಸ್/ಕಛೇರಿ ದೂರವಾಣಿ: **080-22867628**

ಸಂಖ್ಯೆ: ಡಿಬಿಸಿ/ಬೆಂನ/ಕ.ಮೇ/ಸಿಆರ್- 08/2019-20 ದಿನಾಂಕ: 08/11/2019

ಗೆ,
ಬೆಂಗಳೂರು ನಗರ ಜಿಲ್ಲೆಯ ಎಲ್ಲಾ
ಕಾಲೇಜುಗಳ ಪ್ರಾಂಶುಪಾಲರಿಗೆ.

ಮಾನ್ಯರೇ,

**ವಿಷಯ:-** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆ.ನಂ. ವಿದ್ಯಾರ್ಥಿ ವೇತನಕ್ಕೆ epass ತಂತ್ರಾಂಶದಲ್ಲಿ ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲನೆ ಮಾಡುವ ಕುರಿತು.

**ಉಲ್ಲೇಖ:-** ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರು ತಿಳಿಸಿರುವ ಮೌಖಿಕ ಸೂಚನೆ.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ ಮೆಟ್ರಿಕ್ ನಂತರ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದಂತೆ ನೀಡಿರುವ ಸೂಚನೆಗಳು ಈ ಕೆಳಗಿನಂತಿವೆ.

1) 2019-20ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆ.ನಂ. ಶಿಷ್ಯವೇತನವು epass ತಂತ್ರಾಂಶದಲ್ಲಿಯೇ ಮುಂದುವರೆಯುವುದು. epass ನಲ್ಲಿ ಅರ್ಜಿ ಸಲ್ಲಿಸಲು 10/11/2019 ಕೊನೆಯ ದಿನಾಂಕವಾಗಿರುತ್ತದೆ.
2) 2019-20ನೇ ಸಾಲಿನಲ್ಲಿ SSP ತಂತ್ರಾಂಶದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.
3) epass ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುವ ಹೊಸ ಮತ್ತು ನವೀಕರಣ ವಿದ್ಯಾರ್ಥಿಗಳ ಅರ್ಜಿಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು 2 ದಿನಗಳೊಳಗೆ ಸಂಗ್ರಹಿಸುವುದು.
4) ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ವಿವರಗಳು ಸರಿಯಾಗಿರುವ ಕುರಿತು ಸಂಬಂಧಿಸಿದ ದಾಖಲೆಗಳ ನಕಲು ಪ್ರತಿಗಳನ್ನು (ಹಾರ್ಡ್ ಕಾಪಿ) ಪಡೆದು ಪರಿಶೀಲಿಸುವುದು.
5) epass ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುವ ಅರ್ಜಿಗಳನ್ನು ಒಂದು ವಾರದೊಳಗೆ ಆನ್‌ಲೈನ್‌ನಲ್ಲಿ ಪರಿಶೀಲನೆ ಮಾಡಿ ಪರಿಶೀಲನಾಧಿಕಾರಿಗಳಿಗೆ ಸಲ್ಲಿಸುವುದು.
6) ಆನ್‌ಲೈನ್‌ನಲ್ಲಿ ನಮೂದಿಸಿರುವ ಮಾಹಿತಿಗಳು ತಪ್ಪಾಗಿದ್ದಲ್ಲಿ ಕಾಲೇಜು ಹಂತದಲ್ಲಿಯೇ ಆನ್‌ಲೈನ್‌ನಲ್ಲಿ ತಿದ್ದುಪಡಿ ಮಾಡಿ ಸರಿಪಡಿಸುವುದು.
7) epass ನಲ್ಲಿ ಮೆಟ್ರಿಕ್ ನಂತರದ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ Adhar Consent Form ಅನ್ನು ಪಡೆದು ಅರ್ಜಿಯ ಜೊತೆಗೆ ದಿನಾಂಕ:13/11/2019ರೊಳಗೆ ಪರಿಶೀಲನಾ ಅಧಿಕಾರಿಗಳಿಗೆ ಕಡ್ಡಾಯವಾಗಿ ಸಲ್ಲಿಸಬೇಕು. Adhar Consent Form ಸಲ್ಲಿಸದ ವಿದ್ಯಾರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.

8) epass ನಲ್ಲಿ ಮೆಟ್ರಿಕ್ ನಂತರದ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ದಿನಾಂಕ:15/11/2019ರ ಒಳಗೆ ಕಡ್ಡಾಯವಾಗಿ ಬ್ಯಾಂಕ್ ಉಳಿತಾಯ ಖಾತೆಗೆ ಆಧಾರ್ ನಂಬರನ್ನು ಜೋಡಣೆ ಮಾಡಬೇಕು. ಬ್ಯಾಂಕ್ ಉಳಿತಾಯ ಖಾತೆಗೆ ಆಧಾರ್ ನಂಬರ್ ಜೋಡಣೆ ಆಗದೇ ವಿದ್ಯಾರ್ಥಿವೇತನ ದೊರಕದಿದ್ದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಜವಾಬ್ದಾರರಲ್ಲ.

ಈ ಮೇಲಿನ ವಿಷಯಗಳನ್ನು ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ಶಿಷ್ಯ ವೇತನಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ತಿಳಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು.

**ಕರ್ನಾಟಕ ಸರಕಾರ**

ಸಂಖ್ಯೆ:ಹಿಂವಕಇ/ವಿವೇ/ಸಿಆರ್-17/2019-20

ಆಯುಕ್ತರ ಕಛೇರಿ,
ನಂ.16-ಡಿ, 3ನೇ ಮಹಡಿ, ದೇವರಾಜ
ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್
ಏರಿಯಾ, ವಸಂತನಗರ, ಬೆಂಗಳೂರು
ದಿನಾಂಕ:08.11.2019

## ಸುತ್ತೋಲೆ

ವಿಷಯ: 2019-20ನೇ ಸಾಲಿನ ವಿದ್ಯಾಸಿರಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳನ್ನು ಡಿ.ಬಿ.ಟಿ. ಮುಖಾಂತರ ಅನುಷ್ಠಾನಗೊಳಿಸಲು ವಿದ್ಯಾರ್ಥಿಗಳಿಂದ ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರ (Aadhar Consent form) ಪಡೆಯುವ ಕುರಿತು.

*********

2019-20ನೇ ಸಾಲಿನ ವಿದ್ಯಾಸಿರಿ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳನ್ನು ಆಧಾರ್ ಆಧರಿತ ಡಿ.ಬಿ.ಟಿ. ಮುಖಾಂತರ ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿರುತ್ತದೆ. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಆಧಾರ್ ಆಧರಿತ ಡಿ.ಬಿ.ಟಿ ಮುಖಾಂತರ ಪಾವತಿಸಲು ಆಧಾರ್ ಸಂಖ್ಯೆ ಬಳಕೆಗೆ ಪ್ರತಿ ವಿದ್ಯಾರ್ಥಿಯಿಂದ ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರ (Aadhar Consent form)ವನ್ನು ಭೌತಿಕವಾಗಿ (Hard copy) ಪಡೆಯುವ ಅವಶ್ಯಕತೆಯಿರುತ್ತದೆ. ಆದ್ದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಹಾಗೂ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ಅರ್ಜಿ ಸಲ್ಲಿಸಿರುವ ಪ್ರತಿ ವಿದ್ಯಾರ್ಥಿಯಿಂದ ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರ (Aadhar Consent form) ವನ್ನು ದಿನಾಂಕ:14.11.2019ರೊಳಗೆ ಕಡ್ಡಾಯವಾಗಿ ಪಡೆಯಲು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಿದೆ.

1. ಈ ಸುತ್ತೋಲೆಯಲ್ಲಿನ ಅಂಶಗಳನ್ವಯ, ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳು ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರವನ್ನು ಸಂಬಂಧಿಸಿದ ವಿದ್ಯಾಸಂಸ್ಥೆಗೆ ತಲುಪಿಸುವಂತೆ ತಿಳಿಸಿ ಕೂಡಲೇ ಸ್ಥಳೀಯ ದಿನ ಪತ್ರಿಕೆಗಳಲ್ಲಿ ಉಚಿತವಾಗಿ ಪ್ರಚಾರ ನೀಡಲು ಕ್ರಮವಹಿಸುವುದು.
2. ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರ (Aadhar Consent form) ದ ಪ್ರತಿಗಳನ್ನು ಅಗತ್ಯ ಸಂಖ್ಯೆಯಲ್ಲಿ ಮುದ್ರಿಸಿಕೊಳ್ಳುವುದು ಹಾಗೂ ಕಾಲೇಜುವಾರು ಅವಶ್ಯವಿರುವ ಪ್ರತಿಗಳ ಸಂಖ್ಯೆಗಳನ್ನು ವಿದ್ಯಾರ್ಥಿ ವೇತನ ಪರಿಶೀಲನಾಧಿಕಾರಿ(Scholarship Verification Officer)ಗಳಿಗೆ ತಲುಪಿಸುವುದು.
3. ವಿದ್ಯಾರ್ಥಿ ವೇತನ ಪರಿಶೀಲನಾಧಿಕಾರಿಗಳು (Scholarship Verification Officer) ಸಂಬಂಧಪಟ್ಟ ಕಾಲೇಜು/ವಿದ್ಯಾಸಂಸ್ಥೆಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಆಧಾರ್ ಸಂಖ್ಯೆ ಬಳಕೆ ಒಪ್ಪಿಗೆ ಪತ್ರ (Aadhar Consent form) ನೀಡುವ ಬಗ್ಗೆ ತಿಳುವಳಿಕೆ ನೀಡುವುದು ಹಾಗೂ ಪ್ರತಿ ವಿದ್ಯಾರ್ಥಿಗೆ ಒಪ್ಪಿಗೆ ಪತ್ರದ ಪ್ರತಿಗಳನ್ನು ತಲುಪಿಸಲು ಕ್ರಮವಹಿಸುವುದು.

...2

4. ಪ್ರತಿ ಕಾಲೇಜು/ವಿದ್ಯಾಸಂಸ್ಥೆಯ ಸೂಚನಾ ಫಲಕದಲ್ಲಿ ಆಧಾರ್ ಬಳಕೆ ಒಪ್ಪಿಗೆ ಪತ್ರ ನೀಡುವ ಬಗ್ಗೆ ಮಾಹಿತಿ ಪ್ರದರ್ಶಿಸಿ ನಿಗದಿತ ಸಮಯದೊಳಗೆ ಒಪ್ಪಿಗೆ ಪತ್ರ ಸಲ್ಲಿಸುವಂತೆ ತಿಳಿಸುವುದು ಹಾಗೂ ಕಾಲೇಜು/ವಿದ್ಯಾಸಂಸ್ಥೆಯ ಮುಖ್ಯಸ್ಥರೊಂದಿಗೆ ಚರ್ಚಿಸಿ ಈ ಸಂಬಂಧ ಅಗತ್ಯ ಕ್ರಮವಹಿಸುವಂತೆ ಕೋರುವುದು.
5. ವಿದ್ಯಾರ್ಥಿಗಳು ಸಹಿಗೊಳಿಸಿದ ಭೌತಿಕ ಒಪ್ಪಿಗೆ ಪತ್ರಗಳನ್ನು ದಿನಾಂಕ:13.11.2019ರೊಳಗೆ ಸಂಬಂಧಿಸಿದ ಕಾಲೇಜು/ವಿದ್ಯಾಸಂಸ್ಥೆಯ ಪ್ರಾಂಶುಪಾಲರಿಗೆ ತಲುಪಿಸುವುದು.
6. ವಿದ್ಯಾರ್ಥಿ ವೇತನ ಪರಿಶೀಲನಾಧಿಕಾರಿ(Scholarship Verification Officer)ಗಳು ವಿದ್ಯಾರ್ಥಿಗಳಿಂದ ಸಹಿಗೊಳಿಸಿದ ಭೌತಿಕ ಒಪ್ಪಿಗೆ ಪತ್ರಗಳನ್ನು ಸಂಬಂಧಿಸಿದ ಪ್ರಾಂಶುಪಾಲರಿಂದ ದಿನಾಂಕ:14.11.2019 ರೊಳಗೆ ಪಡೆದು ಕಾಲೇಜುವಾರು ಬಂಡಲ್‌ಗೊಳಿಸಿ, ಸದರಿ ಬಂಡಲ್‌ಗಳನ್ನು ಸಂಬಂಧಿಸಿದ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳ ಕಛೇರಿಯಲ್ಲಿ ಸಂರಕ್ಷಿಸಿಡುವುದು.
7. ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು ತಮ್ಮ ತಾಲ್ಲೂಕಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಂದ ಭೌತಿಕ ಒಪ್ಪಿಗೆ ಪತ್ರಗಳು ಸ್ವೀಕೃತವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
8. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಈ ಸುತ್ತೋಲೆಯ ಕ್ರಮವನ್ನು ಅನುಸರಿಸಿ ನಿಗದಿತ ಅವಧಿಯೊಳಗೆ ಒಪ್ಪಿಗೆ ಪತ್ರಗಳನ್ನು ಪಡೆಯಲು ಅಗತ್ಯ ಕ್ರಮವಹಿಸುವುದು ಹಾಗೂ ಕೈಗೊಂಡ ಕ್ರಮದ ಕುರಿತು ಆಯುಕ್ತಾಲಯಕ್ಕೆ ವರದಿ ಸಲ್ಲಿಸುವುದು.

(ಪಿ. ವಸಂತಕುಮಾರ್, ಭಾ.ಆ.ಸೇ)
ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು

**ಪ್ರತಿಯನ್ನು ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ:**

1. ರಾಜ್ಯದ ಎಲ್ಲಾ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು
2. ಸಂಬಂಧಿಸಿದ ಕಾಲೇಜು/ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ – ಜಿ.ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ
3. ರಾಜ್ಯದ ಎಲ್ಲಾ ತಾಲ್ಲೂಕು ಹಿಂದುಳಿದ ವರ್ಗಗಳ ವಿಸ್ತರಣಾಧಿಕಾರಿಗಳು – ಜಿ.ಹಿಂ.ವ. ಕಲ್ಯಾಣಾಧಿಕಾರಿಗಳ ಮೂಲಕ

## ದೃಢೀಕರಣಕ್ಕಾಗಿ ಒಪ್ಪಿಗೆ

ಆಧಾರ್ ಸಂಖ್ಯೆ ______________________ ಹೊಂದಿರುವ ನಾನು ಕರ್ನಾಟಕ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಯು.ಐ.ಡಿ.ಎ.ಐ ವತಿಯಿಂದ ನನ್ನ ಆಧಾರ್ ಸಂಖ್ಯೆ, ಹೆಸರು ಹಾಗೂ ಬೆರಳಚ್ಚು/ಐರಿಸ್ ಕುರಿತ ಮಾಹಿತಿಯನ್ನು ಪಡೆಯಲು ಈ ಮೂಲಕ ಒಪ್ಪಿಗೆ ನೀಡಿರುತ್ತೇನೆ. ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆಂತರಿಕ ಬಳಕೆಗೆ ಮಾತ್ರ ಈ ಮಾಹಿತಿಯನ್ನು ಬಳಸಿಕೊಂಡು ಆಧಾರ್ ಸೀಡಿಂಗ್ ಹಾಗೂ ಡಿಬಿಟಿ ಅನುಷ್ಠಾನ ಸಲುವಾಗಿ ಮಾತ್ರ ಬಳಸಲಾಗುವುದೆಂದು ತಿಳಿಸಿದ್ದು, ನನ್ನ ಬೆರಳಚ್ಚು/ಐರಿಸ್ ಮಾಹಿತಿಯನ್ನು ಯಾವುದೇ ರೀತಿ ಉಳಿಸಿಕೊಳ್ಳುವುದು/ಉಪಯೋಗಿಸಿಕೊಳ್ಳದೇ ಕೇವಲ ಸಿ.ಐ.ಡಿ.ಆರ್ ನೊಂದಿಗೆ ದೃಢೀಕರಣಕ್ಕಾಗಿ ಮಾತ್ರ ಬಳಸಿಕೊಳ್ಳಲಾಗುವುದೆಂದು ತಿಳಿಸಲಾಗಿರುತ್ತದೆ.

ಆಧಾರ್ ಸಂಖ್ಯೆ:

ಬ್ಯಾಂಕ್ ಖಾತೆ ಸಂಖ್ಯೆ:

ಆಧಾರ್ ಸಂಖ್ಯೆಯನ್ನು ಹೊಂದಿರುವ ಅಭ್ಯರ್ಥಿಯ ಸಹಿ/ಒಪ್ಪಿರುತ್ತೇನೆ.

## Consent for Authentication

I, the holder of Aadhar number ______________________ hereby give my consent to Backward Classes Welfare Department, Government of Karnataka to obtain my Aadhar number, Name and Finger print/Iris for authentication with UIDAI. The Backward Classes Welfare Department, Government of Karnataka has informed me that my identity information would only be used for the seeding within in the department and for DBT purpose and also informed that my biometrics will be stored/shared and will be submitted to CIDR only for the purpose of authentication.

Aadhar No.:

Bank Account No.:

Signature of the Aadhar number holder/I agree

ಕರ್ನಾಟಕ ಸರ್ಕಾರ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,

ಬೆಂಗಳೂರು ನಗರ ಜಿಲ್ಲೆ.

# "ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿಶೇಷ ಸೂಚನೆ"

**Karepass** (ಇ–ಪಾಸ್) ತಂತ್ರಾಂಶದಲ್ಲಿ ವಿದ್ಯಾಸಿರಿ, ವಿದ್ಯಾರ್ಥಿವೇತನ ಮತ್ತು ಶುಲ್ಕ ಮರುಪಾವತಿ ಯೋಜನೆಗಳಡಿ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು ಕಡ್ಡಾಯವಾಗಿ ನಿಮ್ಮ ಆಧಾರ್ ಸಂಖ್ಯೆಯನ್ನು ನಿಮ್ಮ ಬ್ಯಾಂಕ್ ಖಾತೆಗೆ ಜೋಡಣೆ ಮಾಡಿಸಿ ಎನ್.ಪಿ.ಸಿ.ಐ **(National Payment Corporation of India)** ದೊಂದಿಗೆ ಮ್ಯಾಪಿಂಗ್ ಮಾಡಿಸಿರಬೇಕು. ಇಲ್ಲವಾದಲ್ಲಿ ನಿಮಗೆ ಮೇಲ್ಕಂಡ ಯಾವುದೇ ಸೌಲಭ್ಯಗಳು ಮಂಜೂರಾತಿಯಾಗಿ ಪಾವತಿ ಮಾಡಲಾಗುವುದಿಲ್ಲ ಎಂಬುದನ್ನು ನಿಮ್ಮ ಗಮನಕ್ಕೆ ತಿಳಿಯಪಡಿಸಲಾಗಿದೆ.

ನಿಮ್ಮ ಅರ್ಜಿ ನಮೂನೆಗಳು ಹಾಗೂ ದಾಖಲಾತಿಗಳೊಂದಿಗೆ ಆಧಾರ್ ಬಳಕೆ ಅನುಮತಿ ಪತ್ರ **(Adhar Consent Form)** ಅನ್ನು ಸಹ ನೀಡುವುದು ಕಡ್ಡಾಯವಾಗಿದೆ.

ಸಹಿ/–

ಜಿಲ್ಲಾ ಅಧಿಕಾರಿಗಳು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು ನಗರ ಜಿಲ್ಲೆ
ಬೆಂಗಳೂರು.